ತೋಟಗಾರಿಕೆ ಉತ್ಪನ್ನಗಳ ಮಾರುಕಟ್ಟೆ ಸಂಸ್ಕರಣೆ ಮತ್ತು ರಫ್ತು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಕರ್ನಾಟಕ ತೋಟಗಾರಿಕೆ ಫೆಡರೇಷನ್, ಬೆಂಗಳೂರಿನ ಹಾಪ್‌ಕಾಮ್ಸ್ ಮತ್ತು ಕೆಪೆಕ್ ನಂತಹ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ.

ವಿವಿಧ ಯೋಜನೆಗಳಡಿ ರೈತರ ಉತ್ಪನ್ನಗಳಿಗೆ ಉತ್ತಮ ಸಂಗ್ರಹಣಾ ಮತ್ತು ಮಾರುಕಟ್ಟೆ ಹಾಗೂ ಸಂಸ್ಕರಣೆ ಮೂಲಸೌಲಭ್ಯಗಳನ್ನು ಕಲ್ಪಿಸಲು ಅಂದರೆ ಶೀತಲಗೃಹಗಳ ಸ್ಥಾಪನೆ, ಪ್ಯಾಕ್‌ಹೌಸ್, ಸಂಸ್ಕರಣಾ ಘಟಕ, ವಾಹನ ಇತ್ಯಾದಿ ಮೂಲ ಸೌಕರ್ಯಗಳ ನಿರ್ಮಾಣಕ್ಕೆ ಸಹಾಯಧನ ನೀಡಲಾಗುತ್ತಿದೆ.

ಬಾಗಲಕೋಟೆಯಲ್ಲಿ ತೋಟಗಾರಿಕೆಗೆಂದೆ ಪ್ರತ್ಯೇಕವಾಗಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ತನ್ಮೂಲಕ ತೋಟಗಾರಿಕೆ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣೆ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.

ರೈತರ ಅನುಕೂಲಕ್ಕಾಗಿ ತರಬೇತಿ, ಪ್ರಾತ್ಯಕ್ಷತೆ, ಪ್ರದರ್ಶನಗಳು, ಮಾರಾಟ ಮೇಳಗಳು, ದೂರವಾಣಿ, ದೂರದರ್ಶನ, ಪುಸ್ತಕಗಳು ಇತ್ಯಾದಿಗಳ ಮೂಲಕ ತಂತ್ರಜ್ಞಾನವನ್ನು ಪ್ರಚಾರ ಮಾಡುವ ಮುಖಾಂತರ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ವಸತಿ ಗೃಹಗಳ ಮಾಹಿತಿ

926 (1496); ಶ್ರೀ ಜಗದೀಶ್ ಕುಮಾರ್ ಆರ್ (ಹೆಬ್ಬಾಳ)

(ಅ) ರಾಜ್ಯದಲ್ಲಿರುವ ಸರ್ಕಾರಿ ನೌಕರರಿಗಾಗಿ ನಿರ್ಮಿಸಿರುವ ವಸತಿ ಗೃಹಗಳೆಷ್ಟು (ಸಿಬ್ಬಂದಿಗಳ ಶ್ರೇಣಿವಾರು ವಿವರ ಒದಗಿಸುವುದು)

(ಆ) ಪ್ರಸ್ತುತ ಭರ್ತಿಯಾಗಿರುವ ಖಾಲಿ ಇರುವ ವಸತಿ ಗೃಹಗಳೆಷ್ಟು; (ಸಿಬ್ಬಂದಿಗಳ ಶ್ರೇಣಿವಾರು ವಿವರ ಒದಗಿಸುವುದು);

(ಇ) ಮಂತ್ರಿಗಳ ಆಪ್ತ ಸಹಾಯಕರಿಗೆ ವಿಶೇಷ ಕೋಟಾದಡಿಯಲ್ಲಿ ವಸತಿ ಗೃಹಗಳನ್ನು ಹಂಚಿಕೆ ಮಾಡಲು ವ್ಯವಸ್ಥೆಯಿದೆಯೇ;

(ಈ) ಅದೇ ರೀತಿ ಶಾಸಕರ ಆಪ್ತ ಸಹಾಯಕರಿಗೂ ವಸತಿ ಗೃಹ ಹಂಚಿಕೆ ಮಾಡುವ ಬಗ್ಗೆ ಸರ್ಕಾರದ ನಿಲುವೇನು?

ಡಾ: ಹೆಚ್. ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

(ಅ) ಒಟ್ಟು ವಸತಿ ಗೃಹಗಳು = 10470

ಗ್ರೂಪ್ – ಎ = 1311

ಗ್ರೂಪ್ – ಬಿ = 1239

ಗ್ರೂಪ್ – ಸಿ ಮತ್ತು ಡಿ = 7920

(ಆ) ಭರ್ತಿ ಆಗಿರುವ ಒಟ್ಟು ವಸತಿ ಗೃಹಗಳು = 9458

ಗ್ರೂಪ್ – ಎ = 1191

ಗ್ರೂಪ್ – ಬಿ = 1140

ಗ್ರೂಪ್ – ಸಿ ಮತ್ತು ಡಿ = 7127

ಖಾಲಿ ಇರುವ ಒಟ್ಟು ವಸತಿ ಗೃಹಗಳು = 1012

ಗ್ರೂಪ್ – ಎ = 120

. ಗ್ರೂಪ್ – ಬಿ = 99

ಗ್ರೂಪ್ – ಸಿ ಮತ್ತು ಡಿ = 793

(ಇ) ಬೆಂಗಳೂರು ವ್ಯಾಪ್ತಿಯಲ್ಲಿಯ ಸರ್ಕಾರಿ ವಸತಿ ಗೃಹಗಳನ್ನು ಮಂತ್ರಿಗಳ ಆಪ್ತ ಸಹಾಯಕರಿಗೂ ಕೂಡಾ ಹಂಚಿಕೆ ಮಾಡಲು ಅವಕಾಶವಿರುತ್ತದೆ.

(ಈ) ಸರ್ಕಾರದಲ್ಲಿ ಇಂತಹ ಪ್ರಸ್ತಾವನೆ ಇರುವುದಿಲ್ಲ.